ಆ) ಈ ತಾಲ್ಲೂಕಿನ ಮೊನ್ನಂಪೇಟೆಯಲ್ಲಿರುವ 66.33 ಕೆ.ವಿ.ವಿದ್ಯುತ್ ಉಪ ಕೇಂದ್ರದ ಸಾಮರ್ಥ್ಯವನ್ನು ಹೆಚ್ಚಿಳಗೊಳಿಸಲು ಕ್ರಮ ಕೈಗೊಂಡಿದ್ದು, ಹಾಲಿ ಇರುವ 8 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸಫಾರ್ಮರ್ ಜೊತೆಗೆ ಇನ್ನೊಂದು 8 ಎಂ.ವಿ.ಎ. ಸಾಮರ್ಥ್ಯದ ಪವರ್ ಟ್ರಾನ್ಸಫಾರ್ಮರ್‌ರನ್ನು ಸ್ಥಾಪಿಸಿದ್ದು, ಸದ್ಯದಲ್ಲೇ ಈ ಪವರ್ ಟ್ರಾನ್ಸಫಾರ್ಮರ್‌ರನ್ನು ಚಾಲನೆಗೊಳಿಸಲಾಗುವುದು. ಈ ಪವರ್ ಟ್ರಾನ್ಸ್‌ಫಾರ್ಮರ್ ಕಾರ್ಯಾರಂಭ ಮಾಡಿದ ನಂತರ ಈ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಪರಿಸ್ಥಿತಿಯಲ್ಲಿ ಸುಧಾರಣೆ ಉಂಟಾಗಲಿದೆ.

ನ್ಯಾಯವಾದಿಗಳ ಸಂಘಗಳಿಗೆ ಕೊಡಬೇಕಾದ ಅನುದಾನ.

622 - ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರು) : ಉತ್ತರಿಸಬೇಕಾದ ದಿನಾಂಕ 4-3-1996 : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ರಾಜ್ಯದಲ್ಲಿ ವಿವಿಧ ಹಂತದಲ್ಲಿ ನ್ಯಾಯವಾದಿಗಳ ಸಂಘಗಳಿಗೆ ಸರ್ಕಾರಿ ಆಜ್ಞೆಯ ಪ್ರಕಾರ ಪ್ರತಿ ವರ್ಷ ಕೊಡಬೇಕಾದ ಅನುದಾನದ ಮೊತ್ತವೆಷ್ಟು,*

ಆ) *ರಾಜ್ಯದಲ್ಲಿರುವ ವಿವಿಧ ಹಂತದ ನ್ಯಾಯವಾದಿಗಳ ಸಂಘಗಳ ಸಂಖ್ಯೆ ಎಷ್ಟು,*

ಇ) *ಸರ್ಕಾರಿ 1993ರ ಆಜ್ಞೆಯ ಪ್ರಕಾರ 1993-94, 1994-95, 1995-96ರಲ್ಲಿ ಸರ್ಕಾರ ಕೊಡಬೇಕಾದ ಅನುದಾನದ ಅಂದಾಜು ವೆಚ್ಚವೆಷ್ಟು,*

ಈ) *1993-94, 1994-95, 1995-96:ರಲ್ಲಿ ವಿವಿಧ ಬಾರ್ ಅಸೋಸಿಯೇಷನ್‌ಗಳಿಗೆ ಸರ್ಕಾರ ಕೊಟ್ಟಿರುವ ವಾಸ್ತವಿಕ ಅನುದಾನದ ಮೊತ್ತವೆಷ್ಟು ?*

ಶ್ರೀ ಯಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ವಾರ್ತಾ ಮತ್ತು ಪ್ರಚಾರ ಸಚಿವರು) :

ಅ)		ರೂ. ಪೈ
1)	ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್	1,00,000-00
2)	ಇಂಡಿಯನ್ ಲಾ ಇನ್ ಸ್ಟಿಟ್ಯೂಟ್ (ಕರ್ನಾಟಕ ಘಟಕ)	20,000-00
3)	ಬೆಂಗಳೂರು ವಕೀಲರ ಸಂಘ	1,00,000.00
4)	ಕಂದಾಯ ವಿಭಾಗ ಮಟ್ಟದ ವಕೀಲರ ವಕೀಲರ ಸಂಘಗಳು (ಬೆಂಗಳೂರು ವಿಭಾಗವನ್ನು ಹೊರತುಪಡಿಸಿ)	25,000.00
5)	ಜಿಲ್ಲಾ ಮಟ್ಟದ ವಕೀಲ ಸಂಘಗಳು	12,500,00

6)	ತಾಲ್ಲೂಕು ಮತ್ತು ಇತರೆ ಸ್ಥಳಗಳಲ್ಲಿ ರುವ ವಕೀಲರ ಸಂಘಗಳು	4,500.00

ಆ) ನ್ಯಾಯವಾದಿ ಸಂಘಗಳ ಒಟ್ಟು ಸಂಖ್ಯೆ : 154.

1)	ರಾಜ್ಯಮಟ್ಟ	2
2)	ಜಿಲ್ಲಾಮಟ್ಟ	20
3)	ತಾಲ್ಲೂಕು ಮಟ್ಟ	132

ಇ)

ವರ್ಷ	ಆಯವ್ಯಯದಲ್ಲಿ ನೀಡಲಾದ ಮೊತ್ತ
1993-94	ರೂ. 11,60,000
1994-95	ರೂ. 11,60,000
1995-96	ರೂ. 11,60,000

ಈ) ವಿವಿಧ ಬಾರ್ ಅಸೋಸಿಯೇಷನ್‌ಗಳಿಗೆ ಸರ್ಕಾರ ಕೊಟ್ಟಿರುವ ವಾಸ್ತವಿಕ ಅನುದಾನದ ಮೊತ್ತ.

1993-94	1994-95	1995-96
ರೂ. 6,55,500	ರೂ. 11,54,500	ರೂ. 11,34,000 (ಧಾರವಾಡದಲ್ಲಿ ಆದ ರಾಜ್ಯ ವಕೀಲರ ಸಮ್ಮೇಳನಕ್ಕೆ ಅನುದಾನ ನೀಡಿದ 5 ಲಕ್ಷ ಮೊತ್ತ ಸೇರಿ) ದಿ:1-3-96ರಂದು ಇದ್ದಂತೆ)

ಉದ್ಯೋಗ ಭರವಸೆ ಯೋಜನೆಗೆ ಸಮಿತಿಗಳು

623 - ಶ್ರೀ ಯು.ಜಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಉದ್ಯೋಗ ಭರವಸೆ ಯೋಜನೆಯ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳ ರಚನೆಯ ಅವಕಾಶ ಇದೆಯೇ? ಹಾಗಿದ್ದಲ್ಲಿ ಎಷ್ಟು ತಿಂಗಳಿಗೆ ಒಮ್ಮೆ ಸಭೆ ಸೇರಬೇಕು,